# ಶೃಂಗಾರವಾಗಿದೆ ಸಿರಿರಂಗನ ಮಂಚ

1. **Ref.:** Dasara Padagalu – Purandara Dasara Keerthane, Samyukta Samputa, Edited by Shri Pavanje Gururao, Sriman Madhwa Siddantha Granthalaya, Udupi, page No. 530.
2. **Ref.:** Purandara Sahitya Darshana, Samputa 2, Adhyatma Darshana edited by Prof. S.K. Ramachandra Rao, page No. 113.
3. **Ref.:** Shri Purandara Dasara Sahitya Part – 1, Pooja Tatva, edited by Shri Betageri Krishna Sharma and Shri Bengeri Huchha Rayaru, page No. 18.
4. **Note:** The lyrics given without highlights are as per Ref. 1. The wordings in Ref. 3 are slightly different and hence they are given separately in yellow highlights. The wordings in Ref. 2 are same as in Ref. 1.
5. **Note:** Singer has followed the lyrics as in Ref. 1.
6. **Note:** The lyrics in Ref. 1 has 7 stanzas and in Ref. 2 and Ref. 3, there are only 5 stanzas.

ರಾಗ: ಬಿಲಹರಿ ತಾಳ: ಅಟ

ಶೃಂಗಾರವಾಗಿಹುದು ಶ್ರೀ ಹರಿಯ ಮಂಚ || ಪ ||
ಅಂಗನೆ ರುಕ್ಮಿಣಿಯರಸನಾ ಮಂಚ || ಅಪ ||

ಬಡಗಿ ಮುಟ್ಟದ ಮಂಚ ಕಡಲಿನೊಳಗಿಹ ಮಂಚ
ಮೃಡನ ತೋಳಿನಲಿ ಅಡಗಿರುವ ಮಂಚ
ಸಡಗರವುಳ್ಳ ಮಂಚ ಹೆಡೆಯುಳ್ಳ ಹೊಸ ಮಂಚ
ಪೊಡವಿಗೊಡೆಯ ಪಾಂಡುರಂಗನ ಮಂಚ || ೧ ||

ಕಾಲಿಲ್ಲದಿಹ ಮಂಚ ಗಾಳಿ ನುಂಗುವ ಮಂಚ
ತೋಳು ಬಿಳುಪಿನ ಮಂಚ ವಿಷದ ಮಂಚ
ಕಾಳಗದೊಳರ್ಜುನನ ಮುಕುಟ ಕೆಡಹಿದ ಮಂಚ
ಕೇಳು ಪರೀಕ್ಷಿತನ ಕೊಂದುದೀ ಮಂಚ || ೨ ||

ಕಣ್ಣು ಕಿವಿಯಾದ ಮಂಚ ಬಣ್ಣ ಬಿಳುಪಿನ ಮಂಚ

ಹೊನ್ನ ಪೆಟ್ಟಿಗೆಯೊಳಗೆ ಅಡಗುವ ಮಂಚ
ಹುಣ್ಣಿಮೆ ಚಂದ್ರನ ಬಣ್ಣ ಕೆಡಹಿದ ಮಂಚ
ಕನ್ನೆ ಮಹಾಲಕ್ಷ್ಮಿಯರಸನಾ ಮಂಚ || ೩ ||

ಹಕ್ಕಿಗೆ ಹಗೆ ಮಂಚ ರೊಕ್ಕ ಮುಕ್ಕದ ಮಂಚ
ರಕ್ಕಸಾರಿ ಪಾಂಡುರಂಗನ ಮಂಚ
ಸಿಕ್ಕಿಲ್ಲದೀ ಮಂಚ ಶ್ರೀಲಕ್ಷ್ಮೀಪತಿ ಮಂಚ
ಪೊಡವಿಗೊಡೆಯ ಪಾಂಡುರಂಗನ ಮಂಚ || ೪ ||

ಅಂಕುಡೊಂಕಿನ ಮಂಚ ಅನಂತ ಕಾಲಿನ ಮಂಚ
ಶಂಕರನ ತೋಳಿಗೆ ಪದಕದ ಮಂಚ
ಶಂಕೆಯೊಳಸುರರ ಸಂಹರಿಸಿದ ಮಂಚ
ಪಂಕಜಾಕ್ಷ ಮುಕುಂದ ಪವಡಿಪ ಮಂಚ || ೫ ||

ಹುತ್ತದೊಳಿಹ ಮಂಚ ಧರೆಯ ಪೊತ್ತಿಹ ಮಂಚ
ಹೆತ್ತಮಕ್ಕಳಿಗೆ ಹೆಸರಿಡುವ ಮಂಚ
ಹತ್ತಬಾರದ ಮಂಚ ಹತ್ತಲೀಸದ ಮಂಚ
ಚಿತ್ತ ಜಪಿತ ತಾನು ಪವಡಿಪ ಮಂಚ || ೬ ||

ಏಳು ಹೆಡೆಯುಳ್ಳ ಮಂಚ ಬಹಳ ಮೃದುವಿನ ಮಂಚ
ಧ್ಯಾನ ಮಾತ್ರದಿ ನಾರದಂಗೊಲಿದ ಮಂಚ
ನಾರಾಯಣನ ಮಂಚ ಶ್ರೀ ಲಕ್ಷ್ಮೀಪತಿ ಮಂಚ
ಸ್ವಾಮಿ ಶ್ರೀ ಪುರಂದರ ವಿಠಲನ ಮಂಚ || ೭ ||

**Note:** The below given lyrics, in yellow highlights, are as per Ref. 3 above.

ರಾಗ: ಶಂಕರಾಭರಣ ತಾಳ: ತ್ರಿವಿಡಿ

ಶೃಂಗಾರವಾಗಿದೆ ಸಿರಿ ರಂಗನ ಮಂಚ
ಅಂಗನೆ ರುಕ್ಮಿಣಿಯರಸನಾ ಮಂಚ || ಪ ||

ಬಡಿಗ ಮುಟ್ಟದ ಮಂಚ ಮಡುವಿನೊಳಿಹ ಮಂಚ

ಮೃಡನ ತೋಳಲಿ ನೆಲೆಸಿಹ ಮಂಚ
ಹೆಡೆಯುಳ್ಳ ಹೊಸ ಮಂಚ ಪೊಡವಿ ಹೊತ್ತಿಹ ಮಂಚ
ಕಡಲಶಯನ ಶ್ರೀರಂಗನ ಮಂಚ || ೧ ||

ಕಣ್ಣು ಮೂಗಿನ ಮಂಚ ಬೆನ್ನು ಬಾಗಿದ ಮಂಚ
ಹುಣ್ಣಿಮೆಯ ಚಂದ್ರಮನ ಅಡ್ಡಗಟ್ಟುವ ಮಂಚ
ಬಣ್ಣ ಬಿಳುಪಿನ ಮಂಚ ಹೊನ್ನು ಕಾದಿಹ ಮಂಚ
ಚೆನ್ನಿಗ ಪರೀಕ್ಷಿತನ ಪ್ರಾಣವ ಕೊಂಡ ಮಂಚ || ೨ ||

ಕಾಲಿಲ್ಲದೋಡುವ ಮಂಚ ಗಾಳಿ ನುಂಗುವ ಮಂಚ
ನಾಲಗೆಯೆರಡುಳ್ಳ ವಿಷದ ಮಂಚ
ಏಳು ಹೆಡೆಯ ಮಂಚ ಮೂಲೋಕದೊಡೆಯನ ಮಂಚ
ಕಾಳಗದಲಿ ಕಿರೀಟಿಯ ಮುಕುಟ ಕೊಂಡ ಮಂಚ || ೩ ||

ಹಕ್ಕಿಗೆ ಹಗೆಯಾದ ಮಂಚ ರೊಕ್ಕ ಮುಟ್ಟದ ಮಂಚ
ರಕ್ಕಸರೆದೆದಲ್ಲಣನ ಮಂಚ
ಸೊಕ್ಕು ಪಿಡಿದ ಮಂಚ ಫಕ್ಕನೆ ಪೋಗುವ ಮಂಚ
ಲಕ್ಕುಮಿ ರಮಣ ಶ್ರೀಹರಿಯ ಮಂಚ || ೪ ||

ಅಂಕುಡೊಂಕಿನ ಮಂಚ ಅಕಲಂಕ ಮಹಿಮ ಮಂಚ
ಸಂಕರುಷಣನೆಂಬ ಸುಖದ ಮಂಚ
ಶಂಕರನ ಕೊರಳಿಗೆ ಪದಕವಾಗಿಹ ಮಂಚ
ವೆಂಕಟ ಪುರಂದರ ವಿಠಲ ರಾಯನ ಮಂಚ || ೫ ||

**ಕಠಿಣ ಪದಗಳ ಅರ್ಥ ಮತ್ತು ಟಿಪ್ಪಣಿ:**

ಬಹುಶಃ ದಾಸರು ಶ್ರೀರಂಗಕ್ಷೇತ್ರಕ್ಕೆ ಹೋಗಿದ್ದಾಗ ರಚಿಸಿದ ಪದ.

**ಶ್ರೀಹರಿಯ ಮಂಚ – ಕಡಲಶಯನ –** ಕ್ಷೀರಸಾಗರ ವಾಸಿ. ಅನಂತಾಸನ, ಕ್ಷೀರಸಾಗರ, ವೈಕುಂಠ ಇವು ವಿಷ್ಣುವಿನ ಅನಾದಿ ಸ್ಥಾನಗಳು.

**ಮಡು** = ಕ್ಷೀರ ಸಾಗರ (ಕಾಳಿಂದಿಯ ಮಡು)

**ಬಡಗಿ ಮುಟ್ಟದ –** ಅಪ್ರಾಕೃತವಾದ.

**ಕಡಲೊಳಿಹ –** ಕ್ಷೀರಸಮುದ್ರದ ಮಧ್ಯದಲ್ಲಿರುವ.

**ಮೃಡನ ತೋಳಲಿ –** ಶಿವನು ನಾಗಾಭರಣ, ಸರ್ಪಭೂಷಣ.

**ಪೊಡವಿ ಪೊತ್ತಿಹ –** ಆದಿಶೇಷನ ಸಾವಿರ ಹೆಡೆಗಳಲ್ಲಿಯ ಒಂದು ಹೆಡೆಯ ಮೇಲೆ ಭೂಮಿ ನಿಂತಿದೆ.

**ಕಣ್ಣು ಮೂಗಿನ ಮಂಚ =** ಹಾವಿಗೆ ಕಿವಿಗಳಿಲ್ಲವೆಂಬುದು ಇದರಿಂದ ಧ್ವನಿತವಾಗುವುದು.

**ಬಣ್ಣ ಬಿಳುಪಿನ ಮಂಚ =** ಶೇಷನ ಮೈ ಬಣ್ಣ ಬಿಳುಪು

**ಗಾಳಿ ನುಂಗುವ –** ಹಾವು ಗಾಳಿಯನ್ನೇ ಉಂಡು ಬದುಕುವುದೆಂದು ನಂಬಿಕೆ 'ವಾತಾಶನ' (ಎಲರುಣಿ).

**ತೋಳು ಬಿಳುಪಿನ –** ಆದಿಶೇಷನ ಮೈಬಣ್ಣ ಬಿಳಿಯೆಂದು ಪ್ರತೀತಿ.

**ಕಾಳಗದೊಳರ್ಜುನನ... –** ಮಹಾಭಾರತ ಯುದ್ಧದಲ್ಲಿ ಕರ್ಣನ ಸರ್ಪಾಸ್ತ್ರದಿಂದ ಅರ್ಜುನನ ಕಿರೀಟವು ಮುರಿದು ಭೂಮಿಗೆ ಬಿದ್ದಿತು; ಕೃಷ್ಣನ ಉಪಾಯದಿಂದ ಅದು ಅರ್ಜುನನ ತಲೆಯನ್ನು ತಾಕದೆ ಅವನು ಉಳಿದುಕೊಂಡ.

**ಪರೀಕ್ಷಿತನ... –** ಚಂದ್ರ ವಂಶದ ಅರಸನೂ ಅರ್ಜುನನ ಮೊಮ್ಮಗನೂ ಆದ ಪರೀಕ್ಷಿತನು ಶುಕ್ರಾಚಾರ್ಯರಿಂದ ಭಾಗವತ ಪುರಾಣವನ್ನು ಏಳು ದಿನಗಳು ಶ್ರವಣಮಾಡಿ ಕಡೆ ದಿನ ತಕ್ಷಕನೆಂಬ ಹಾವು ಕಚ್ಚಿ ಸತ್ತನು.

**ಚೆನ್ನಿಗ ಪರೀಕ್ಷಿತನ ...... ಮಂಚ =** ಚಂದ್ರ ವಂಶದ ಅರಸ. ಪರೀಕ್ಷಿತ ಅರ್ಜುನನ ಮೊಮ್ಮಗ. ಅಭಿಮನ್ಯು

- ಉತ್ತರೆಯರ ಮಗ. ಇವನು ಬೇಟೆಗಾಗಿ ಹೋದಾಗ ನೀರಡಿಸಿ ಶಮೀಕ ಋಷಿಯ ಆಶ್ರಮಕ್ಕೆ ಹೋದನು. ಶಮೀಕನು ತಪಸ್ಸು ಮಾಡುತ್ತಿದ್ದನು. ತನ್ನ ಮಾತನ್ನು ಕೇಳದುದಕ್ಕೆ ಸಿಟ್ಟಿಗೆದ್ದು ಪರೀಕ್ಷಿತ ಸತ್ತ ಹಾವನ್ನು ಅವನ ಕೊರಳಿಗೆ ಹಾಕಿದ. ಅವನ ಮಗನಾದ ಶೃಂಗಿ ಇದನ್ನು ನೋಡಿ ಸಿಟ್ಟಿಗೆದ್ದು. ತನ್ನ ತಂದೆಗೆ ಅಪಮಾನ ಮಾಡಿದವನು ಇಂದಿಗೆ ಏಳು ದಿನದೊಳಗಾಗಿ ಹಾವು ಕಚ್ಚಿ ಸಾಯಲಿ ಎಂದು ಶಾಪ ಕೊಟ್ಟ. ಪರೀಕ್ಷಿತನು ಎಷ್ಟೆಷ್ಟು ಪ್ರಯತ್ನ ಪಟ್ಟರು ಶಾಪವು ಹುಸಿಯಾಗದೆ, ಕೊನೆಗೆ ತಕ್ಷಕನೆಂಬ ಹಾವಿನಿಂದ ಮೃತನಾದನು.

**ನಾಲಗೆಯೆರಡುಳ್ಳ ವಿಷದ ಮಂಚ : -** ಇದರ ಹಿನ್ನೆಲೆಯ ಕತೆ ಇದು; ಕಶ್ಯಪನಿಗೆ ವಿನತೆ ಮತ್ತು ಕದ್ರು ಎಂಬಿಬ್ಬರು ಪತ್ನಿಯರು, ಅವರಲ್ಲಿ ಸವತಿ ಮತ್ಸರ. ಕದ್ರು ಉಪಾಯದಿಂದ ವಿನತೆಯನ್ನು ಅವಮಾನಗೊಳಿಸಿ

ತನ್ನ ಊಳಿಗದವಳಾಗಿ ಇರಿಸಿಕೊಂಡಳು. ವಿನತೆಯ ಮಗ ಗರುಡನು ತನ್ನ ತಾಯಿಯ ವಿಮೋಚನೆಗಾಗಿ ಅಮೃತ ತರಲು ಸ್ವರ್ಗಕ್ಕೆ ಹೋದ. ದೇವತೆಗಳ ಸಂಗಡ ಹೋರಾಡಿ, ಅಮೃತ ಕಳಸವನ್ನು ತಂದ. ತಂದು ತನ್ನ ತಾಯಿಗಿತ್ತು ಅವಳನ್ನು ಸೆರೆಯಿಂದ ಬಿಡಿಸಿದ. ಕದ್ರುವಿನ ಮಕ್ಕಳಾದ ವಾಸುಕಿ ಮೊದಲಾದ ಸರ್ಪಗಳನ್ನು ದ್ವೇಷದಿಂದ ಕಾಡತೊಡಗಿದನು. ಗರುಡನು ಅಮೃತ ಕಳಸವನ್ನು ತಂದಿದ್ದು ಇಂದ್ರನಿಗೆ ಇಷ್ಟವಾಗುವುದಿಲ್ಲ. ಗರುಡನು ನಾಗರಿಗೆ ಸ್ನಾನಮಾಡಿ ಬಂದು ಅಮೃತವನ್ನು ಸೇವಿಸಿದೆಂದು ಹೇಳಲು, ಅವರು ಅತ್ತ ಹೋದಾಗ, ಇಂದ್ರನು ಆ ಕಲಶವನ್ನು ಮಾಯಮಾಡಿದನು. ತಿರುಗಿ ಬಂದ ನಾಗರು ಹುಲ್ಲಿನ ಮೇಲೆ ಬಿದ್ದ ಅಮೃತವನ್ನು ನೆಕ್ಕಿದ್ದರಿಂದ ಅವರ ನಾಲಿಗೆ ಎರಡು ಸೀಳಾದವು.

**ಕಣ್ಣು ಕಿವಿಯಾದ –** ಹಾವಿಗೆ ಕಿವಿಗಳಿರವೆಂದೂ, ಅದರ ಕಣ್ಣೇ ತೀಕ್ಷ್ಣವಾಗಿದ್ದು ಅದರಿಂದಲೇ ಶಬ್ದವನ್ನೂ ಅರಿತುಕೊಳ್ಳುವುದೆಂದೂ ನಂಬಿಕೆ.

**ಹುಣ್ಣಿಮೆಯ ಚಂದ್ರಮನ... –** ರಾಹುವೆಂಬ ದೈತ್ಯನು ಸರ್ಪಾಕಾರದಿಂದ ಬಂದು ಚಂದ್ರನನ್ನು ನುಂಗುವುದು ಚಂದ್ರ ಗ್ರಹಣದ ಸಂದರ್ಭ.

**ಹೊನ್ನ ಕಾದಿಹ –** ಭೂಗತವಾದ ನಿಧಿಯನ್ನು ಹಾವು ಕಾಪಿಡುವುದೆಂಬ ನಂಬಿಕೆ.

**ಹಕ್ಕಿಗೆ ಹಗೆಯಾದ** – ಗರುಡ

**ಎದೆ + ತಲ್ಲಣ** = ಎದೆಯನ್ನು ಒಡೆಯಿಸುವವ.

**ಸೊಕ್ಕುಪಿಡಿದ –** ಶೇಷನ ಗರ್ವಭಂಗವಾದ ಕತೆ ಹಿನ್ನೆಲೆ. ಈ ಕತೆ ಭವಿಷ್ಯೋತ್ತರ ಪುರಾಣದಲ್ಲಿ ಬರುತ್ತದೆ.

ಶ್ರೀ ಲಕ್ಷ್ಮೀ-ವೆಂಕಟೇಶರು ಏಕಾಂತದಲ್ಲಿದ್ದಾಗ ಶೇಷ ದೇವರನ್ನು ದ್ವಾರಪಾಲಕನ ಕೆಲಸದಲ್ಲಿ ನೇಮಿಸಿದರು. ಆಗ ವಾಯು ದೇವರು ದರ್ಶನಕ್ಕೆಂದು ಬರಲು, ಅವರನ್ನು ಒಳಗೆ ಬಿಡಲಿಲ್ಲ. ಇಬ್ಬರಿಗೂ ಹೋರಾಟ ನಡೆಯಿತು. ಪರಮಾತ್ಮನಿಗೆ ಇದು ಗೊತ್ತಾಯಿತು. ಆಗ ಶ್ರೀ ವೆಂಕಟೇಶನು ಶೇಷ ದೇವರಿಗೆ ವಾಯುವಿನ ಸಾಮರ್ಥ್ಯವನ್ನು ನಿದರ್ಶನಕ್ಕೆ ತಂದುಕೊಟ್ಟು, ಅವನ ಅಹಂಕಾರವನ್ನು ಅಡಗಿಸಿದನು.

**ಅಕಲಂಕ ಮಹಿಮ –** ನಿರ್ದೋಷವಾಗಿರುವುದೇ ಶೇಷನು ಹರಿಯ ಸೇವೆಗೆ ಅಧಿಕಾರವನ್ನು ಪಡೆದುದಕ್ಕೆ ಕಾರಣ, ಪರಿಶುದ್ಧವಾದ

**ಸಂಕರುಷಣ** – ಸಂಕರ್ಷಣ, ವಿಷ್ಣುವಿನ ವ್ಯೂಹಾವತಾರಗಳಲ್ಲಿ ಒಂದು; ಶ್ರೀ ಹರಿಗೂ ಈ ಹೆಸರಿದೆ. 'ನಾನು ಎನ್ನುವ ಅಭಿಮಾನವೇ ಸಂಕರ್ಷಣ'ನೆಂದು ಸಾತ್ವತಮತದ ಕಲ್ಪನೆ. ಬಲರಾಮನ ಹೆಸರು; ಶೇಷ ದೇವರು; ದೇವಕಿಯ ಬಸಿರಿನಿಂದ ರೋಹಿಣಿಯ ಬಸುರಿಗೆ ಬಂದನಾಗಿ ('ಗರ್ಭ ಸಂಕರ್ಷಣಾತ್') ಸಂಕರ್ಷಣನೆಂದು ಭಾಗವತ ಪುರಾಣದ ಒಕ್ಕಣೆ. ವಿಷ್ಣುವಿನ ತಾಮಸೀ ರೂಪವೆಂದು ಹರಿವಂಶದಲ್ಲಿದೆ. ಇವನನ್ನೇ ಅನಂತನೆಂದೂ ಕರೆಯುವರು. "ಸಂಕರ್ಷಣ ದ್ವಿತೀಯಸ್ಯ ಬಲಂ ವಿಷ್ಣೋಃ ಪ್ರವರ್ಧತಾಂ" ಎಂದು ಪತಂಜಲಿಯ ಮಹಾಭಾಷ್ಯದಲ್ಲಿ ಮಾತಿದೆ.

**Classification:** Keerthane
**Ankita:** purandara vittala
**Location:** NA
**Category:** pooja tatva, Krishna Stuti
**Sub-Category:** ranga, mancha, Lakshmi, shiva, shesha, Vishnu, Krishna, bangara, Chandra, kannu, moogu, parikshita, prana, nalige, visha, loka, pakshi, asura, garuda, amruta
**Pravachana:** NA
**Explanation:** NA